ಮಹಿಳಾ ದಿನ ವಿಶೇಷ



# ಗೆಲುವಿನ ಮಾನದಂಡ ಅಲ್ಲೂ ಪುರುಷ ಝುಂಡಾ?

## ಯಶಸ್ಸಿನ ಸೂತ್ರಗಳನ್ನು ಮರುರೂಪಿಸಬೇಕಾದುದು ಇಂದಿನ ಅಗತ್ಯ

**ವಿದ್ಯಾವಂತ ಗಂಡು ದುಡಿದು ಸೆಟಲ್ ಆಗುವುದನ್ನು ಸಮಾಜ ಯಶಸ್ಸು ಎನ್ನುತ್ತದೆ. ಹೆಣ್ಣಿನ ಯಶಸ್ಸನ್ನು ಆಕೆ ಕುಟುಂಬವನ್ನು ಹೇಗೆ ನಿಭಾಯಿಸುತ್ತಾಳೆ ಎನ್ನುವುದರ ಮಾನದಂಡದಲ್ಲಿ ಗುರ್ತಿಸಲಾಗುತ್ತದೆ. ಈ ಪೂರ್ವಗ್ರಹ ಬದಲಾಗುವುದು ಯಾವಾಗ?**



■ ಸಮುದ್ಯತಾ ಕಂಜರ್ಪಣೆ

ಬೆಳಗ್ಗೆ ಹೊತ್ತಿಗೆ ಮುಂಚೆ ಎದ್ದು ಜಾಗಿಂಗ್ ಮುಗಿಸಿ, ಮನೆಗೆ ಬಂದು ಸಿದ್ಧವಾದ ಜ್ಯೂಸ್ ಕುಡಿದು ಸ್ನಾನ ಮಾಡಿ, ಒಂದಿಷ್ಟು ಓದಿ, ತಿಂಡಿ ತಿಂದು ಆಫೀಸಿಗೆ ಹೊರಡುವುದು ಅವನ ದಿನಚರಿ. ಸಂಜೆಗಳಲ್ಲೂ ಆತನ ದಿನಚರಿ ಹೀಗೇ ಇರುತ್ತದೆ. ಶಿಸ್ತು ರೂಢಿಸಿಕೊಂಡ ಅಧಿಕಾರಿ ಎಂದೇ ಹೆಸರು ಮಾಡಿದಾತ. ಅವನ ಯಶಸ್ಸಿನ ಕುರಿತು ಕೇಳಿದಾಗೆಲ್ಲ ಆತ ಶಿಸ್ತು ರೂಢಿಸಿಕೊಳ್ಳುವುದರ ಬಗ್ಗೆ ಮಾತನಾಡುತ್ತಾನೆ.

***

ಹತ್ತನೇ ತರಗತಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ. ಮನೆಯವರ ಬೆಂಬಲದ ಜೊತೆ ಜೊತೆಗ ತಾನು ರೂಢಿಸಿಕೊಂಡ ಯಶಸ್ಸಿನ ಸೂತ್ರಗಳ ಕುರಿತಾಗಿ ಇತರರಿಗೆ ಹೇಳುತ್ತಾನೆ. ಅವನ ಯಶಸ್ಸಿನ ಹಿಂದೆ ವಿದ್ಯೆ, ಶಿಸ್ತು, ಆಹಾರ, ಅಧ್ಯಯನ ಎಲ್ಲವೂ ಇವೆ.

***

ಆಕೆ ದೊಡ್ಡ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿರುವಾಕೆ. ಆದರೂ ಮನೆಗೆ ನೆಂಟರು ಬಂದಾಗ ಏನಿದ್ದರೇನು, ಒಂದು ಮಗುವನ್ನು ಹೆರಲಿಲ್ಲ ಎನ್ನುವ ಟೀಕೆ ಕೇಳಿ ಬರುತ್ತಲೇ ಇರುತ್ತದೆ. ಮನೆ ಹಾಗೂ ಉದ್ಯೋಗವನ್ನು ನಿಭಾಯಿಸುವಲ್ಲಿ ಆಕೆಯ ಆರೋಗ್ಯ ಹಿಂದುಳಿಯುತ್ತದೆ. ಉನ್ನತ ಹುದ್ದೆಯನ್ನು ಗೆಲುವು ಎಂದುಕೊಂಡವಳಿಗೆ ಅದು ಗೆಲುವಲ್ಲ ಎನ್ನುವ ಆತಂಕ ಶುರುವಾಗಿದೆ.

***

ಮನೆ ಕೆಲಸ ನಿಭಾಯಿಸೋಕಾಗಿಲ್ಲ ಅಂದ್ರೆ ಕೆಲಸ ಬಿಟ್ಟು ಮನೇಲಿ ಕೂರು, ನಿನ್ನ ಸಂಬಳದಿಂದ ಮನೆ ನಡೆಯೋ ಅಗತ್ಯ ಇಲ್ಲ ಎನ್ನುತ್ತಾನೆ ಅವನು. ಅವಳಿಗೆ ಹಾಗಾದರೆ ನನ್ನ ಸಾಧನೆ ಬರೀ ಮನೆ–ಮಕ್ಕಳನ್ನು ನೋಡ್ಕೊಳೋದು ಮಾತ್ರವಾ? ಅದು ಕಡಿಮೆಯಾ, ಹೆಚ್ಚಾ? ನನಗ್ಯಾಕೆ ಎಲ್ಲರ ಹಾಗೆ ಕೆಲಸ ಮಾಡೋಕಾಗ್ತಿಲ್ಲ? ಅವಳಿಗೆ ಕೊರಗು ಶುರುವಾಗಿದೆ.

### ಯಶಸ್ಸಿನ ಸೂತ್ರಗಳು ಹೆಣ್ಣಿಗೆ ಭಿನ್ನವೇ?

ಬದುಕಿನಲ್ಲಿ ಯಶಸ್ವಿಯಾಗುವುದು ಹೇಗೆ ಎನ್ನುವ ಪ್ರಶ್ನೆಯ ಜೊತೆ ಜೊತೆಗೇ, ಯಶಸ್ವಿ ಪುರುಷನ ಹಿಂದಿನ ಮಹಿಳೆ ಎನ್ನುವುದೂ ಸೇರಿಬಿಟ್ಟಿದೆ. ಯಶಸ್ಸು ಎನ್ನುವುದನ್ನು ನಾವು ಯಾವ ರೀತಿ ಅರ್ಥೈಸಿಕೊಳ್ಳುತ್ತೇವೆ ಎನ್ನುವುದಕ್ಕಿಂತಲೂ ಮೊದಲು ಯಶಸ್ಸಿನ ಸಿದ್ಧ ಮಾದರಿಗಳನ್ನು, ಸೂತ್ರಗಳನ್ನು ಅಳವಡಿಸಿಕೊಂಡು ಏನೋ